ದಿನಾಂಕ 14.06.2024
ಅಸಲು ದಾವೆ 54/2011
ಡಿ.ಡಬ್ಲ್ಯೂ: 2

**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಹೆಚ್.ಪಿ.ಎಸ್. ವಕೀಲರಿಂದ :</u>**

ನಾನು ಎಂ.ಎ. ಪಿ.ಹೆಚ್.ಡಿ. ಮಾಡಿರುತ್ತೇನೆ. ನಾನು ಮಂಡ್ಯದ ಡಿಗ್ರಿ ಕಾಲೇಜಿನಲ್ಲಿ ಉಪನ್ಯಾಸಕಾರಾಗಿ ಕೆಲಸ ಮಾಡುತ್ತಿದ್ದೇನೆ. ನಿಮ್ಮ ತಂದೆ 1ನೇ ಪ್ರತಿವಾದಿ ಈ ದಾವೆಯಲ್ಲಿ ಡಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿದಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಾನು ಈ ದಾವೆಯನ್ನು ನನ್ನ ತಂದೆ ತೀರಿಕೊಂಡ ನಂತರ ಅಂದರೆ ಸುಮಾರು 7 ವರ್ಷಗಳಿಂದ ಮುಂದುವರೆಸಿಕೊಂಡು ಬರುತ್ತಿದ್ದೇನೆ. ನಾನು ಈ ದಾವೆಯನ್ನು ಮುಂದುವರೆಸಿರುವುದಕ್ಕಿಂತ ಮುಂಚೆ ಈ ದಾವೆಯಲ್ಲಿ ಏನೇನು ಪ್ರಕ್ರಿಯೆಗಳು ನಡೆದಿವೆ ಎಂಬುದನ್ನು ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿರುತ್ತೇನೆ. ಈ ದಾವೆ ಮೊದಲು ಇದೇ ದಾವೆಯ ಪಕ್ಷಗಾರರ ನಡುವೆ ಮಂಡ್ಯದ ನ್ಯಾಯಾಲಯದಲ್ಲಿ ಒ.ಎಸ್.100/1993 ದಾಖಲಿಸಲಾಗಿದ್ದು, ಈ ನ್ಯಾಯಾಲಯ ಸ್ಥಾಪನೆ ಆದ ನಂತರ jurisdiction ಆದಾರದ ಮೇಲೆ ಸದರಿ ದಾವೆ ಇದೇ ನ್ಯಾಯಾಲಯಕ್ಕೆ ವರ್ಗಾಣೆಯಾಗಿ ಬಂದ ನಂತರ ಅದನ್ನು ಒ.ಎಸ್.29/2000 ಎಂದು ನೊಂದಾಯಿಸಿಕೊಳ್ಳಲಾಗಿದ್ದು, ಆ ದಾವೆ ವಿಚಾರಣೆ ನಡೆದು ತೀರ್ಪು ಸಹಾ ಆಗಿದೆ ಆ ಬಗ್ಗೆ ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಗೊತ್ತಿದೆ ಎಂದು ಉತ್ತರಿಸುತ್ತಾರೆ. ಸದರಿ ದಾವೆಯ ತೀರ್ಪು ದಿನಾಂಕ 19.12.2001 ರಂದು ಆಗಿದ್ದು ಅದರ ದೃಢೀಕೃತ ನಕಲನ್ನು ಈ ದಾವೆಯಲ್ಲಿ ಹಾಜರು ಪಡಿಸಿ ನಿಪಿ.10 ಎಂದು ನಿಶಾನೆಯಾಗಿ ಗುರುತಿಸಿಕೊಳ್ಳಲಾಗಿದೆ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ಉತ್ತರಿಸುತ್ತಾರೆ. ಆ ದಾವೆಯಲ್ಲಿಯೂ ಸಹಾ ನನ್ನ ತಂದೆ 1ನೇ ಪ್ರತಿವಾದಿಯಾಗಿದ್ದು ನ್ಯಾಯಾಲಯದ ಮುಂದೆ ಡಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿದಿದ್ದಾರೆ ಎಂದರೆ ಸರಿ.

ಒ.ಎಸ್. 29/2000 ಹಾಗೂ ಈ ದಾವೆ ಒ.ಎಸ್.54/2011 ರಲ್ಲಿ ನಿಮ್ಮ ತಂದೆ ಏನು ಸಾಕ್ಷ್ಯನುಡಿದಿದ್ದಾರೆ ಎಂಬುದನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ನನ್ನ ತಂದೆ ಒ.ಎಸ್. 29/2000 ಹಾಗೂ ಈ ದಾವೆ ಒ.ಎಸ್.54/2011 ರಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾರೆ ಎಂಬುದನ್ನು ನಾನು

ತಿಳಿದುಕೊಂಡಿದ್ದೇನೆ. ಒ.ಎಸ್. 29/2000 ಹಾಗೂ ಈ ದಾವೆ ಒ.ಎಸ್.54/2011 ರಲ್ಲಿ ನಿಮ್ಮ ತಂದೆ ನುಡಿದಿರುವ ಸಾಕ್ಷ್ಯದ ಬಗ್ಗೆ ಮತ್ತು ಲಿಖಿತ ಹೇಳಿಕೆಯ ಸಂಗತಿಗಳ ಬಗ್ಗೆ ನಿಮ್ಮದೇನಾದರೂ ಆಕ್ಷೇಪ ಇದೆಯಾ ಎಂದರೆ ಸಾಕ್ಷಿ ಇದೆ ಎಂದು ಉತ್ತರಿಸುತ್ತಾರೆ. ಪುನಃ ಮುಂದುವರೆದು 3 ಕೇಸ್ ಗಳು ಇವೆ ಯಾವುದು ಎಂದು ಓದಲು ಕೊಟ್ಟರೆ ನಾನು ಆಕ್ಷೇಪ ಇದೆಯಾ ಅಥವಾ ಇಲ್ಲವಾ ಎಂದು ಹೇಳಬಹುದು ಎಂದು ಉತ್ತರಿಸುತ್ತಾರೆ.

ನಿಮ್ಮ ತಂದೆ ಬದುಕಿದ್ದಾಗ ನಿಮ್ಮ ಮತ್ತು ನಿಮ್ಮ ತಂದೆಯ ನಡುವೆ ಏನಾದರೂ ವೈಮನಸ್ಸು ಇತ್ತಾ ಎಂದರೆ ಸಾಕ್ಷಿ ಇಲ್ಲ ಚೆನ್ನಾಗಿದ್ದೆವು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಏನು ವ್ಯವಹಾರಗಳನ್ನು ಮಾಡಿದ್ದಾರೋ ಆ ವ್ಯವಹಾರಗಳಿಂದ ನಿಮಗೆ ಏನಾದರೂ ಅನ್ಯಾಯ ಆಗಿದೆಯಾ ಎಂದರೆ ಸಾಕ್ಷಿ ನನಗೇನು ಅನ್ಯಾಯ ಆಗಿಲ್ಲ ಎಂದು ಉತ್ತರಿಸುತ್ತಾರೆ. ಸುಮಾರು 11-12 ನೇ ವಯಸ್ಸಿನಲ್ಲಿ ಬುದ್ದಿ ಜ್ಞಾನ ಬಂದಿರುತ್ತದೆ. ನಮ್ಮ ತಂದೆ ಬದುಕಿರುವವರಗೊ ನಾನು ಅವರ ಜೊತೆಯಲ್ಲೇ ವಾಸವಾಗಿದ್ದೆ. ಈ ಕೇಸ್ ವ್ಯವಹಾರದ ಬಗ್ಗೆ ನಾನು ಮತ್ತು ನನ್ನ ತಂದೆ ಮಾತನಾಡಿದ್ದೇವೆ. ಒ.ಎಸ್.29/2000 ದಾವೆಯ ತೀರ್ಪನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ RFA 384/2002 ಸಲ್ಲಿಸಲಾಗಿತ್ತು ಎಂದರೆ ಸರಿ. ಸದರಿ ಮೇಲ್ಮನವಿ ತೀರ್ಪು ದಿನಾಂಕ 05.08.2011 ರಂದು ಆಗಿದ್ದು ಅದರ ದೃಢೀಕೃತ ನಕಲನ್ನು ಈ ದಾವೆಯಲ್ಲಿ ನಿಪಿ.1 ಎಂದು ವಾದಿ ಪರ ನಿಶಾನೆಗೊಳಿಸಲಾಗಿದೆ ಎಂದರೆ ಸಾಕ್ಷಿ ಮಾನ್ಯ ಉಚ್ಚ ನ್ಯಾಯಾಲಯದ RFA 384/2002 ರ ತೀರ್ಪಿನ ಪ್ರಕಾರ ವಿಲ್ ವಜಾ ಆಗಿದೆ ಎಂದು ನಮ್ಮ ತಂದೆಯ ಮೂಲಕ ನಾನು ತಿಳಿದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. RFA 384/2002 ರಲ್ಲಿ ನಿಮ್ಮ ತಂದೆ 1ನೇ ಎದುರುದಾರರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. RFA 384/2002 ರ ತೀರ್ಪನ್ನು ನಾನು ನೋಡಿಲ್ಲ ನಾನು ಕೇಳಿ ತಿಳಿದುಕೊಂಡಿದ್ದೇನೆ. ನಾನು ಡಬಲ್ ಗ್ರಾಜ್ಯುಯಟ್ ಆಗಿರುವ ಕಾರಣ ಇಂಗ್ಲೀಷ್ ನಲ್ಲಿ ಇರುವ ಯಾವುದೇ ತೀರ್ಪನ್ನು ಓದಿ ತಿಳಿದುಕೊಳ್ಳುವ ಶಕ್ತಿ ಇರುತ್ತದೆ ಎಂದರೆ ಸರಿ . ಒ.ಎಸ್. 29/2000 ಹಾಗೂ RFA 384/2002 ಇವುಗಳ ತೀರ್ಪನ್ನು ಓದಿ ತಿಳಿದುಕೊಂಡಿರುವುದಿಲ್ಲ, ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ ತೀರ್ಪುಗಳನ್ನು ಈಗಲೂ ನೀವು ಓದಿ ತಿಳಿದುಕೊಳ್ಳಲು ಮತ್ತು ವಕೀಲರಿಂದ ಓದಿಸಿ ತಿಳಿದುಕೊಳ್ಳಲು ತೊಂದರೆ ಏನಾದರೂ ಇದೆಯಾ ಎಂದರೆ ಸಾಕ್ಷಿ ನಾನು ಮಾನ್ಯ ಉಚ್ಚ ನ್ಯಾಯಾಲಯದ ಅಪೀಲಿನ ತೀರ್ಪನ್ನು ನೋಡಿದ್ದೇನೆ ಅದರ ಕೊನೆಯ ಪುಟದಲ್ಲಿ appeal dismissed ಎಂದು ಇರುವುದನ್ನು ನೋಡಿದ್ದೇನೆ ಎಂದು ಉತ್ತರಿಸುತ್ತಾರೆ.

ನಿಮ್ಮ ತಂದೆ ಡಿ.ಡಬ್ಲ್ಯೂ 1 ಎಂದು ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿದು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನೆಲ್ಲಾ ಬರೆಯಲಾಗಿದೆಯೋ ಅದೆಲ್ಲಾ ಸಂಗತಿಗಳನ್ನು ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿ ನನ್ನ ತಂದೆ ಹೇಳಿರುವುದನ್ನು ಎಲ್ಲವನ್ನೂ ನಾನು ವಕೀಲರಿಗೆ ಹೇಳಿ ಬರೆಸಿದ್ದೇನೆ ಎಂದು ಉತ್ತರಿಸುತ್ತಾರೆ. ನಾನು ನನ್ನ ತಾತ ನಂಜಾಚಾರಿ ರವರನ್ನು ನೋಡಿದ್ದೆನೆ. ಅವರು ತೀರಿಕೊಂಡಾಗ ನಾನು 6 ನೇ ತರಗತಿಯಲ್ಲಿ ಓದುತ್ತಿದ್ದೆ, ಆಗ ನನಗೆ ಸುಮಾರು 12-13 ವರ್ಷ ವಯಸ್ಸು. ನಂಜಾಚಾರಿಯವರು ಬದುಕಿದ್ದ ಕಾಲದಲ್ಲಿ ಅವರಿಗೆ ಆಸ್ತಿಗಳು ಹೇಗೆ ಬಂದವು ಎಂಬುದನ್ನು ಕೇಳಿ ತಿಳಿದುಕೊಳ್ಳುವ ಪ್ರಸಂಗ ಬಂದಿರುವುದಿಲ್ಲ. ನಮ್ಮ ತಾತ ಚಿಕ್ಕನಹಳ್ಳಿ ಗ್ರಾಮದಿಂದ ವಳಗೆರೆ ಹಳ್ಳಿ ಗ್ರಾಮಕ್ಕೆ ಬಂದರು, ನನ್ನ ತಾತ ಮತ್ತು ನನ್ನ ತಂದೆ ಇಬ್ಬರೂ ಸೇರಿ ಜಂಟಿಯಾಗಿ ಆಸ್ತಿಗಳನ್ನು ಖರೀದಿಸಿರುತ್ತಾರೆ. ನಮ್ಮ ತಾತ ಚಿಕ್ಕನಹಳ್ಳಿಯಲ್ಲಿ ಇದ್ದ ಆಸ್ತಿಗಳನ್ನು ಏನು ಮಾಡಿ ಬಂದರು ಗೊತ್ತಾ ಎಂದರೆ ಸಾಕ್ಷಿ ಆ ಹಳ್ಳಿಯಲ್ಲಿ ಆಸ್ತಿಗಳು ಇದ್ದವೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ, ನಾನು ತಿಳಿದುಕೊಂಡ ಹಾಗೆ ಆ ಹಳ್ಳಿಯಲ್ಲಿ ನನ್ನ ತಾತನಿಗೆ ಯಾವುದೇ ಆಸ್ತಿಗಳು ಇರಲಿಲ್ಲ ಎಂದು ಉತ್ತರಿಸುತ್ತಾರೆ. ವಳಗೆರೆ ಹಳ್ಳಿ ಗ್ರಾಮದಲ್ಲಿ ಆಸ್ತಿಗಳನ್ನು ಮಾಡಿರುತ್ತಾರೆ. ಪತ್ರಗಳನ್ನು ನಾನು ನೋಡಿದ್ದೇನೆ. ಯಾವ ಇಸವಿಯದ್ದು ಎಂದರೆ ಸಾಕ್ಷಿ ಹೊಲಕ್ಕೆ ಸಂಬಂಧಿಸಿದಂತೆ 1966-67 ನೇ ಇಸವಿಯ ಆರ್.ಟಿ.ಸಿ ನೋಡಿದ್ದೇನೆ, ಕ್ರಯ ಪತ್ರ ನೋಡಿರುವುದಿಲ್ಲ. 1966-67 ನೇ ಇಸವಿಯಲ್ಲಿ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ನೀವು 1966-67 ನೇ ಇಸವಿಯಲ್ಲಿಹುಟ್ಟಿರುವುದಿಲ್ಲ ಆದರೂ ಯಾವ ಆಧಾರದ ಮೇಲೆ ನಿಮ್ಮ ತಂದೆ ಮತ್ತು ತಾತ ಆಸ್ತಿಗಳನ್ನು ಜಂಟಿಯಾಗಿ ಕೊಂಡರು ಎಂದು ಹೇಳುತ್ತೀರಿ ಎಂದರೆ ಸಾಕ್ಷಿ ನಮ್ಮ ತಂದೆ ಹೇಳಿದ್ದರು ಎಂದು ಉತ್ತರಿಸುತ್ತಾರೆ. ನಿಮ್ಮ ತಾತ ಹಾಗೂ ತಂದೆ ಜಂಟಿಯಾಗಿ ಆಸ್ತಿಗಳನ್ನು ಖರೀದಿಸಿರುವ ಪತ್ರಗಳನ್ನು ನೀವು ಈಗಲೂ ನೋಡಲು ನಿಮಗೆ ತೊಂದರೆ ಏನು ಇಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

1992 ನೇ ಇಸವಿ ಜೂನ್ ತಿಂಗಳು ಆ ಸಮಯದಲ್ಲಿ ನಿಮಗೆ ಎಷ್ಟು ವರ್ಷ ವಯಸ್ಸು ಎಂದರೆ ಸಾಕ್ಷಿ 12 ವರ್ಷ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ನೀವು ನಿಮ್ಮ ತಂದೆಯ ಮತ್ತು ತಾತನ ಕುಟುಂಬದ ವ್ಯವಹಾರಗಳಲ್ಲಿ ಭಾಗವಹಿಸುವಂತಹ ಪ್ರಸಂಗಗಳು ಏನಾದರೂ ಬಂದಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.1992 ನೇ ಇಸವಿ ಜೂನ್ ತಿಂಗಳಲ್ಲಿ ವಿಭಾಗವಾಗಿದೆ ಎಂದು ಪ್ರಮಾಣ ಪತ್ರದಲ್ಲಿ ಹೇಳಿದ್ದೀರಿ ನಿಮಗೆ ಎಷ್ಟು ವರ್ಷ ಆದ ನಂತರ

ಗೊತ್ತಾಯಿತು ಎಂದರೆ ಸಾಕ್ಷಿ ಆಗಲೇ ಗೊತ್ತಾಯಿತು, ನನ್ನ ತಂದೆ ಬಂದು ವಿಭಾಗ ಆಯಿತು ಎಂದು ನನಗೆ ಹೇಳಿದರು ಎಂದು ಉತ್ತರಿಸುತ್ತಾರೆ. ಎರಡೂ ದಾವೆಗಳಲ್ಲಿ ನಿಮ್ಮ ತಂದೆ ಸದರಿ 1992 ನೇ ಇಸವಿಯ ವಿಭಾಗದ ಬಗ್ಗೆ ಹೇಳಿದ್ದಾರೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಸದರಿ ಸಾಕ್ಷ್ಯ ವನ್ನು ನಮ್ಮ ತಂದೆ ಎರಡು ದಾವೆಗಳಲ್ಲಿ ನುಡಿದಿರುವ ಬಗ್ಗೆ ನನ್ನ ಯಾವುದೇ ಆಕ್ಷೇಪಣೆ ಇರುವುದಿಲ್ಲ. 1992 ರಲ್ಲಿ ವಿಭಾಗವನ್ನು ಯಾರು ಯಾರಿಗೆ ಪಾಲು ಆಯಿತು ಎಂದರೆ ಸಾಕ್ಷಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪನ ನಡುವೆ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ನಿಮ್ಮ ಚಿಕ್ಕಪ್ಪ ಎಂದರ ಈ ದಾವೆಯ 6 ನೇ ವಾದಿ ಎನ್.ಮನುಬ್ರಹ್ಮಚಾರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಈ ದಿನ ಅವರು ನ್ಯಾಯಾಲಯದಲ್ಲಿ ಹಾಜರಿದ್ದಾರೆ.

**ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ.ಹೇ.ಕೇ. ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮದ್ದೂರು.**